# ಚೆಂದವ ನೋಡಿರೆ ಗೋಕುಲಾ

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 21
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 233
3. **Note:** Lyrics mentioned without highlights are as per Ref. 1. The wordings given in yellow highlights are as per Ref. 2. These wordings are slightly different.
4. **Note:** Singer has followed lyrics as in Ref. 2.
5. **Note:** First line in Stanza No.3 is to be clarified by the researchers. One explanation is that Sri Krishna is a very small kid (ಬಾಲಕೃಷ್ಣ) and as a kid he will have hesitations (ಅಸ್ವೈರ್ಯ) and that may be mentioned by Sri Pavanje Guru Rao. Also, this may be the inner meaning of Sri Purandara Dasa.
6. **Note:** First line in Pallavi. gOkulAnandana & gOkula nandana (ಗೋಕುಲಾನಂದನ & ಗೋಕುಲ ನಂದನ) - here both seem to be apt and correct.

| | |
|---|---|
| ರಾಗ: ಸಾರಂಗ ತಾಳ: ರೂಪಕ | ರಾಗ: ಮುಖಾರಿ ತಾಳ: ಅಟ |
| | |
| ಚೆಂದವ ನೋಡಿರೆ ಗೋಕುಲಾ | ಚೆಂದವ ನೋಡಿರೆ ಗೋಕುಲ |
| ನಂದನ ಮೂರುತಿಯ ॥ ಪ ॥ | ನಂದನ ಮೂರುತಿಯ |
| | |
| ಅಂದುಗೆ ಪಾಡಗ ಗೆಜ್ಜೆಯ ಧರಿಸಿ | ಅಂದುಗೆ ಪಾಡಗ ಗೆಜ್ಜೆಯ ಧರಿಸಿ |
| ಧಿಂ ಧಿಂ ಧಿಮಿಕೆಂದು ಕುಣಿವ ಕೃಷ್ಣನ ॥ ಅಪ ॥ | ಧಿಂ ಧಿಮಿಕೆಂದು ಕುಣಿಯುವ ಕೃಷ್ಣನ |
| | |
| ಕೊರಳ ಪದಕ ಹಾರ ಬಿಗಿದು | ಕೊರಳ ಪದಕ ಹಾರ ಬಿಗಿದು |
| ತರಳರೆಲ್ಲರ ಕೂಡಿಕೊಂಡು | ತರಳರೆಲ್ಲರ ಕೂಡಿಕೊಂಡು |
| ಕುರುಳುಗೂದಲ ಅರಳೆಲೆಯು | ಕುರುಳುಗೂದಲು ಅರಳೆಲೆಯ |
| ಮಿರು ಮಿರುಗುತ ಮೆರೆವ ಕೃಷ್ಣನ ॥ 1 ॥ | ಥಳ ಥಳಿಸುತ ಮೆರೆವ ಕೃಷ್ಣನ |
| | |
| ಉಡೆಯ ಗಂಟೆ ಘಣ ಘಣೆನುತ | ಉಡಿಯ ಘಂಟೆ ಘಳಿಲೆನುತ |
| ನುಡಿಯ ಮೆಲ್ಲನೆ ಪಿಡಿದುಕೊಂಡು | ನುಡಿದು ಮೆಲ್ಲನೆ ಪಿಡಿದುಕೊಂಡು |
| ನಡೆದಾಡುತ ಸಡಗರದಲಿ | ನಡೆಗೆ ಮಾಲುತ ಸಡಗರದಲಿ |
| ಬೆಡಗ ಮಾಡಿ ಆಡುವ ರಂಗನ ॥ 2 ॥ | ಬೆಡಗು ಮಾಡಿ ಆಡುವ ರಂಗನ |
| | |
| ಬಲು ಬಲು ಆಶ್ಚೈರ್ಯದಿಂದ | ಬಲು ಅಸ್ವೈರ್ಯದಿಂದಲಿ |

ನಲಿವ ಪುರಂದರ ವಿಠಲ ರಾಯ
ಹಲವು ಸುಖವ ನಮಗೆ ಇತ್ತ
ಜಲಜಲೋಚನ ಬಾಲಕೃಷ್ಣನ ॥ 3 ॥

ನಲಿವ ಪುರಂದರ ವಿಠಲ ರಾಯ
ಹಲವು ಸುಖವ ನಮಗಿತ್ತ
ಜಲಜಲೋಚನ ಬಾಲಕೃಷ್ಣನ

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಕುಣಿಯುವ ಶ್ರೀ ಕೃಷ್ಣನ ಬೆಡಗನ್ನು ಈ ಹಾಡಿನಲ್ಲಿ ಬಣ್ಣಿಸಲಾಗಿದೆ.

**ಗೋಕುಲಾನಂದನ = ಗೋಕುಲ ನಂದನ** = ಶ್ರೀ ಕೃಷ್ಣನ

**ಕುರುಳುಕೂದಲು** = ಗುಂಗುರು ಕೂದಲು

**ಉಡೆ** = ಸೊಂಟ

**Classification:** Keerthane
**Ankita:** purandara vittala
**Location:** NA
**Category:** Krishna Leele
**Sub-Category:** Krishna, gokula, gejje, ranga, bhaya, sukha, santosha, ADu, ATa
**Pravachana:** NA
**Explanation:** NA